**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2016–17ನೇ ಸಾಲಿನ ಹಿಂಗಾರು ಹಂಗಾಮಿಗೆ ರಾಜ್ಯದ ಕೆಲವು ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸುವ ಬಗ್ಗೆ.

**ಓದಲಾಗಿದೆ:** ದಿನಾಂಕ:10.01.2017ರಂದು ನಡೆದ ಸಚಿವ ಸಂಪುಟದ ಉಪಸಮಿತಿ ಸಭೆಯ ನಡವಳಿ

*****

**ಪ್ರಸ್ತಾವನೆ:**

ರಾಜ್ಯದಲ್ಲಿನ ಬರ, ಪ್ರವಾಹ ಪರಿಸ್ಥಿತಿ ಹಾಗೂ ಇತರೆ ನೈಸರ್ಗಿಕ ವಿಪತ್ತುಗಳಿಂದ ಉದ್ಭವಿಸಬಹುದಾದ ಪರಿಸ್ಥಿತಿಯನ್ನು ಪರಾಮರ್ಶಿಸಲು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಚಿವ ಸಂಪುಟದ ಉಪಸಮಿತಿಯು ದಿನಾಂಕ:10.01.2017ರಂದು ನಡೆದ ಸಭೆಯಲ್ಲಿ ರಾಜ್ಯದಲ್ಲಿನ 2016–17ನೇ ಸಾಲಿನ ಹಿಂಗಾರು ಹಂಗಾಮಿನ ಮಳೆ ಪರಿಸ್ಥಿತಿ, ಬೆಳೆ ಪರಿಸ್ಥಿತಿ ಹಾಗೂ ಜಲಾಶಯಗಳ ನೀರಿನ ಮಟ್ಟ ಇತ್ಯಾದಿ ಕುರಿತು ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರು ಸಮಿತಿಗೆ ಮಾಹಿತಿ ನೀಡಿದ ಸಂದರ್ಭದಲ್ಲಿ 2016ನೇ ಹಿಂಗಾರು ಹಂಗಾಮಿನಲ್ಲಿ ಅಂದರೆ (1ನೇ ಅಕ್ಟೋಬರ್‌ರಿಂದ 31ನೇ ಡಿಸೆಂಬರ್ 2016ರವರೆಗೆ) ರಾಜ್ಯದಲ್ಲಿ 180 ಮಿ.ಮೀ ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವಿಕವಾಗಿ 54 ಮಿ.ಮೀ ಮಳೆಯಾಗಿದೆ. ಒಟ್ಟಾರೆ ಶೇ.–71 ಮಳೆ ಕೊರತೆ ಉಂಟಾಗಿರುತ್ತದೆ. 25 ಜಿಲ್ಲೆಗಳ 142 ತಾಲ್ಲೂಕುಗಳ 587 ಹೋಬಳಿಗಳಲ್ಲಿ ತೀವ್ರ ಮಳೆಕೊರತೆ ಉಂಟಾಗಿರುತ್ತದೆ. ಈ ಕೊರತೆಯು ಕಳೆದ 46 ವರ್ಷಗಳಲ್ಲೆ ಅತೀ ಹೆಚ್ಚಾಗಿರುತ್ತದೆ. ಇದರಿಂದಾಗಿ ಅಂತರ್ಜಲ ಮಟ್ಟವು ಕುಸಿದಿದ್ದು, ಶೇ.92 ರಷ್ಟು ಪ್ರದೇಶದಲ್ಲಿ ಸಾಧಾರಣ ತೇವಾಂಶ ಕೊರತೆ ಕಂಡುಬಂದಿದೆ. ಮುಂಗಾರು ಹಂಗಾಮಿನಲ್ಲಿ 32.52 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ನಿಗಧಿಪಡಿಸಲಾಗಿದ್ದು, 24.69 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿರುತ್ತದೆ. ಎಲ್ಲಾ ಪ್ರಮುಖ ಜಲಾಶಯಗಳ ನೀರಿನ ಪ್ರಮಾಣವು ಕೂಡ ಅತ್ಯಂತ ಕಡಿಮೆ ಇದೆ. ಸಣ್ಣ ನೀರಾವರಿ ಕೆರೆಗಳ ಪೈಕಿ ಶೇ.7 ರಷ್ಟು ಕೆರೆಗಳಲ್ಲಿ ಮಾತ್ರ ಶೇ.50ಕ್ಕಿಂತ ಹೆಚ್ಚು ನೀರಿನ ಸಂಗ್ರಹಣೆ ಇದೆ. ಶೇ.40 ರಷ್ಟು ಕೆರೆಗಳಲ್ಲಿ ನೀರಿನ ಪ್ರಮಾಣ ಶೇ.30 ರಿಂದ 50 ರಷ್ಟು ಹಾಗೂ ಶೇ.53 ರಷ್ಟು ಕೆರೆಗಳು ಪೂರ್ಣವಾಗಿ ಬತ್ತಿರುವುದಾಗಿ ತಿಳಿಸಿರುತ್ತಾರೆ.

ರಾಜ್ಯದಲ್ಲಿ 2016–17ನೇ ಸಾಲಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಉಂಟಾಗಿರುವ ತೀವ್ರ ಮಳೆಕೊರತೆಯಿಂದಾಗಿ ಬಿತ್ತನೆಯಾಗಿರುವ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳು ಕೆಲವು ಜಿಲ್ಲೆಗಳು ಪೂರ್ಣವಾಗಿ ಹಾನಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಪ್ರಕಟಿಸಿರುವ 2016ರ ಬರ ಕೈಪಿಡಿಯಲ್ಲಿನ ಮಾರ್ಗಸೂಚಿ ಪ್ರಕಾರ ಸತತ 6 ವಾರಗಳ ಮಳೆಕೊರತೆ, ಶುಷ್ಕ ವಾತಾವರಣ, ತೇವಾಂಶ ಕೊರತೆ, ಬೆಳೆಹಾನಿ, ಅಂತರ್ಜಲ ಕುಸಿತ ಇತ್ಯಾದಿ ಮಾನದಂಡಗಳ ಪ್ರಕಾರ ರಾಜ್ಯದ 176 ತಾಲ್ಲೂಕುಗಳ ಪೈಕಿ 160 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಈ ಮೇರೆಗೆ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 18 ಟಿಎನ್‌ಆರ್ 2017; ಬೆಂಗಳೂರು, ದಿನಾಂಕ: 24-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016–17ನೇ ಸಾಲಿನ ಹಿಂಗಾರು ಹಂಗಾಮಿಗೆ ಅನುಬಂಧದಲ್ಲಿ ನಮೂದಿಸಿರುವ ರಾಜ್ಯದ 30 ಜಿಲ್ಲೆಗಳ 160 ತಾಲ್ಲೂಕುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ "ತೀವ್ರ ಬರಪೀಡಿತ" ತಾಲ್ಲೂಕುಗಳೆಂದು ಘೋಷಿಸಿ ಸರ್ಕಾರ ಆದೇಶಿಸಿದೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬರಪೀಡಿತ ಪ್ರದೇಶವೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಕೂಡಲೇ ಬೆಳೆ ಹಾನಿಯ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಆದೇಶಿಸಿದೆ.

ಬರಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಭೂರಹಿತ ಕಾರ್ಮಿಕರು, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಒದಗಿಸುವ ಕ್ರಮ, ಕುಡಿಯುವ ನೀರು ಸರಬರಾಜು, ಮೇವು ಸರಬರಾಜು ಮತ್ತು ಜಾನುವಾರು ಸಂರಕ್ಷಣೆ ಇತ್ಯಾದಿ ಬರಪರಿಹಾರ ಕಾರ್ಯಗಳನ್ನು ಎಸ್.ಡಿ.ಆರ್.ಎಫ್./ಎನ್.ಡಿ.ಆರ್.ಎಫ್. ಮಾರ್ಗಸೂಚಿಯ ಪ್ರಕಾರ ಕೈಗೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/1/17

(ಕೆ.ಆರ್.ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು – ಈ ಆದೇಶವನ್ನು ಕೂಡಲೇ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ:**

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು.
3) ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು/ ಕಲಬುರಗಿ ಮತ್ತು ಬೆಳಗಾವಿ ವಿಭಾಗ,
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6) ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು.
7) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
8) ಆಯುಕ್ತರು, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ, ಬೆಂಗಳೂರು.
9) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
10) ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ಉಸ್ತುವಾರಿ ಕೇಂದ್ರ, ಅಟ್ಟೂರು ಬಡಾವಣೆ, ಯಲಹಂಕ, ಬೆಂಗಳೂರು.
11) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12) ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13) ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
14) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
15) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
16) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

17) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
18) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
19) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
20) ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
21) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
22) ಮಾನ್ಯ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು.
23) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
24) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
25) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
26) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರುರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
27) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ರವರ ಆಪ್ತ ಕಾರ್ಯದರ್ಶಿ.
28) ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಲೆಕ್ಕಪತ್ರ ಶಾಖೆ.
29) ಶಾಖಾ ರಕ್ಷಾ ಕಡತ.

*****

ಸರ್ಕಾರದ ಆದೇಶ ಸಂಖ್ಯೆಆರ್‌ಡಿ 18 ಟಿಎನ್‌ಆರ್ 2017; ದಿನಾಂಕ: 24.01.2017ಕ್ಕೆ ಅನುಬಂಧ

2016-17ನೇ ಸಾಲಿನ ಹಿಂಗಾರು ಋತುವಿಗೆ ಬರಪೀಡಿತ ಪ್ರದೇಶಗಳೆಂದು ಘೋಷಣೆಯಾದ ತಾಲ್ಲೂಕುಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕು |
|---|---|---|
| 1 | ಬೆಂಗಳೂರು ನಗರ | 1.ಆನೇಕಲ್ 2.ಬೆಂಗಳೂರು ಉತ್ತರ 3.ಬೆಂಗಳೂರು ದಕ್ಷಿಣ 4.ಬೆಂಗಳೂರು ಪೂರ್ವ |
| 2 | ಬೆಂಗಳೂರು ಗ್ರಾಮಾಂತರ | 5.ದೇವನಹಳ್ಳಿ 6.ದೊಡ್ಡಬಳ್ಳಾಪುರ 7.ಹೊಸಕೋಟೆ 8.ನೆಲಮಂಗಲ |
| 3 | ರಾಮನಗರ | 9.ಚನ್ನಪಟ್ಟಣ 10.ಕನಕಪುರ 11.ಮಾಗಡಿ 12.ರಾಮನಗರ |
| 4 | ಕೋಲಾರ | 13.ಬಂಗಾರಪೇಟೆ 14.ಕೋಲಾರ 15.ಮಾಲೂರು 16.ಮುಳಬಾಗಿಲು 17.ಶ್ರೀನಿವಾಸಪುರ |
| 5 | ಚಿಕ್ಕಬಳ್ಳಾಪುರ | 18.ಬಾಗೇಪಲ್ಲಿ 19.ಚಿಕ್ಕಬಳ್ಳಾಪುರ 20.ಚಿಂತಾಮಣಿ 21.ಗುಡಿಬಂಡೆ 22.ಶಿಡ್ಲಘಟ್ಟ 23.ಗೌರಿಬಿದನೂರು |
| 6 | ತುಮಕೂರು | 24.ಶಿರ 25.ಚಿಕ್ಕನಾಯಕನಹಳ್ಳಿ 26.ಗುಬ್ಬಿ 27.ಕೊರಟಗೆರೆ 28.ಕುಣಿಗಲ್ 29.ಮಧುಗಿರಿ 30.ಪಾವಗಡ 31.ತಿಪಟೂರು 32.ತುಮಕೂರು 33.ತುರುವೇಕೆರೆ |
| 7 | ಚಿತ್ರದುರ್ಗ | 34.ಚಳ್ಳಕೆರೆ 35.ಚಿತ್ರದುರ್ಗ 36.ಹಿರಿಯೂರು 37.ಹೊಸದುರ್ಗ 38.ಮೊಳಕಾಲ್ಮೂರು 39.ಹೊಳಲ್ಕೆರೆ |
| 8 | ದಾವಣಗೆರೆ | 40.ಚನ್ನಗಿರಿ 41.ದಾವಣಗೆರೆ 42.ಹರಪ್ಪನಹಳ್ಳಿ 43.ಹರಿಹರ 44.ಹೊನ್ನಳ್ಳಿ 45.ಜಗಳೂರು |
| 8 | ಚಾಮರಾಜನಗರ | 46.ಚಾಮರಾಜನಗರ 47.ಗುಂಡ್ಲುಪೇಟೆ 48.ಕೊಳ್ಳೆಗಾಲ 49.ಯಳಂದೂರು |
| 10 | ಮೈಸೂರು | 50.ಹೆಗ್ಗಡದೇವನಕೋಟೆ 51.ಹುಣಸೂರು 52.ಕೃಷ್ಣರಾಜನಗರ 53.ಮೈಸೂರು 54.ನಂಜನಗೂಡು 55.ಪಿರಿಯಾಪಟ್ಟಣ 56.ಟಿ.ನರಸೀಪುರ |
| 11 | ಮಂಡ್ಯ | 57.ಕೃಷ್ಣರಾಜಪೇಟೆ 58.ಮಳವಳ್ಳಿ 59.ಪಾಂಡವಪುರ 60.ಶ್ರೀರಂಗಪಟ್ಟಣ 61.ಮದ್ದೂರು 62.ನಾಗಮಂಗಲ 63.ಮಂಡ್ಯ |
| 12 | ಬಳ್ಳಾರಿ | 64.ಬಳ್ಳಾರಿ 65.ಸಂಡೂರು 66.ಹಡಗಲಿ 67.ಹೊಸಪೇಟೆ 68. ಹಗರಿಬೊಮ್ಮನಹಳ್ಳಿ 69.ಕೂಡ್ಲಗಿ 70.ಶಿರಗುಪ್ಪ |
| 13 | ಕೊಪ್ಪಳ | 71.ಗಂಗಾವತಿ 72.ಯಲಬುರ್ಗ 73.ಕೊಪ್ಪಳ 74.ಕುಷ್ಟಗಿ |
| 14 | ರಾಯಚೂರು | 75.ದೇವದುರ್ಗ 76.ಲಿಂಗಸಗೂರು 77.ಸಿಂಧನೂರು 78.ರಾಯಚೂರು 79.ಮಾನ್ವಿ |
| 15 | ಕಲಬುರಗಿ | 80.ಅಫಜಲ್‌ಪುರ 81.ಅಲಂದ 82.ಚಿಂಚೋಳಿ 83.ಚಿತ್ತಾಪುರ 84.ಕಲಬುರಗಿ 85.ಜೇವರ್ಗಿ 86.ಸೇಡಂ |
| 16 | ಯಾದಗಿರಿ | 87.ಶಹಪುರ 88.ಸೋರಾಪುರ 89.ಯಾದಗಿರಿ |
| 17 | ಬೀದರ್ | 90.ಹುಮನಬಾದ್ |
| 18 | ಬೆಳಗಾವಿ | 91.ಬೈಲಹೊಂಗಲ 92.ಅಥನಿ 93.ಬೆಳಗಾವಿ 94.ಗೋಕಾಕ್ 95.ಖಾನಾಪುರ 96.ರಾಮದುರ್ಗ 97.ಸೌದತ್ತಿ 98 ಚಿಕ್ಕೋಡಿ 99.ಹುಕ್ಕೇರಿ 100.ರಾಯಭಾಗ |
| 19 | ಬಾಗಲಕೋಟೆ | 101.ಬಾದಾಮಿ 102.ಬೀಳಗಿ 103.ಹುನಗುಂದ 104.ಮುಧೋಳ 105.ಬಾಗಲಕೋಟೆ 106.ಜಮಖಂಡಿ |

| | | |
|---|---|---|
| 20 | ವಿಜಯಪುರ | 107.ವಿಜಯಪುರ. 108.ಇಂಡಿ 109.ಮುದ್ದೇಬಿಹಾಳ 110.ಸಿಂಧಗಿ 111.ಬಸವನಬಾಗೇವಾಡಿ |
| 21 | ಗದಗ | 112.ಗದಗ 113.ಮುಂಡರಗಿ 114.ನರಗುಂದ 115.ರೋಣ 116.ಶಿರಹಟ್ಟಿ |
| 22 | ಹಾವೇರಿ | 117.ಹಿರೇಕೆರೂರು 118.ಸಾವನೂರು 119.ಹಾವೇರಿ 120.ಶಿಗ್ಗಾವಿ 121.ಬ್ಯಾಡಗಿ 122.ಹಾನಗಲ್ 123.ರಾಣಿಬೆನ್ನೂರು |
| 23 | ಧಾರವಾಡ | 124.ಕಲಘಟಗಿ 125.ಕುಂದಗೋಳ 126.ನವಲಗುಂದ 127.ಧಾರವಾಡ 128.ಹುಬ್ಬಳ್ಳಿ |
| 24 | ಶಿವಮೊಗ್ಗ | 129.ಭದ್ರಾವತಿ 130.ಹೊಸನಗರ 131.ಶಿಕಾರಿಪುರ 132.ಶಿವಮೊಗ್ಗ 133.ಸೊರಬ 134.ತೀರ್ಥಹಳ್ಳಿ |
| 25 | ಹಾಸನ | 135.ಅರಕಲಗೂಡು 136.ಅರಸೀಕೆರೆ 137.ಬೇಲೂರು 138.ಹಾಸನ 139.ಆಲೂರು 140.ಹೊಳೇನರಸೀಪುರ 141.ಚನ್ನರಾಯಪಟ್ಟಣ |
| 26 | ಚಿಕ್ಕಮಗಳೂರು | 142.ಚಿಕ್ಕಮಗಳೂರು 143. ಕಡೂರು 144.ಕೊಪ್ಪ 145.ನರಸಿಂಹರಾಜಪುರ 146.ತರಿಕೆರೆ |
| 27 | ಕೊಡಗು | 147.ಸೋಮವಾರಪೇಟೆ 148.ವಿರಾಜಪೇಟೆ |
| 28 | ದಕ್ಷಿಣ ಕನ್ನಡ | 149.ಬಂಟ್ವಾಳ 150.ಮಂಗಳೂರು |
| 29 | ಉಡುಪಿ | 151.ಕಾರ್ಕಳ 152.ಕುಂದಾಪುರ 153.ಉಡುಪಿ |
| 30 | ಉತ್ತರ ಕನ್ನಡ | 154. ಭಟ್ಕಳ 155.ಹಳಿಯಾಳ 156.ಹೊನ್ನಾವರ 157.ಕಾರವಾರ 158.ಮುಂಡಗೋಡ 159.ಸೂಪ 160.ಯಲ್ಲಾಪುರ |

24.1.17

(ಕೆ.ಆರ್ ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3)